




2016ರಲ್ಲಿ ಇವರು ತಮ್ಮ ಮನೆಯನ್ನು ಮೀಡೋಸ್ ಎಂಬ ಸ್ಥಳದಿಂದ ಜುಮೇರಾ ಪಾರ್ಕ್ ಎಂಬ ಸ್ಥಳಕ್ಕೆ ಬದಲಿಸುವ ಸಮಯದಲ್ಲಿ ಮನೆಯ ಹಳೆಯ ವಸ್ತುಗಳು–ಉಪಕರಣಗಳನ್ನು ಅಗತ್ಯವುಳ್ಳವರಿಗೆ ದಾನ ಮಾಡಿ ಹೊಸ ಮನೆಗೆ ಹೊಸ ವಸ್ತುಗಳನ್ನು ಕೊಂಡಿದ್ದರು. ಅವರ ಹಳೆಯ ಫ್ರಿಜ್ ಅನ್ನು ಸುಮಯ್ಯಾ ಎಂಬ ಮಹಿಳೆಗೆ ದಾನವಾಗಿ ನೀಡಿದರು. ಆದರೆ ಸುಮಯ್ಯಾರವರಲ್ಲಿ ಅದಾಗಲೇ ಒಂದು ಫ್ರಿಜ್ ಇತ್ತು. ಹಾಗಾಗಿ, ದಾನದ ಫ್ರಿಜ್ ಅನ್ನು ರಂಜಾನ್ ತಿಂಗಳಲ್ಲಿ ಉಪವಾಸವಿರುವ ಕಾರ್ಮಿಕರಿಗೆ ಉಚಿತ ನೀರು ಒದಗಿಸಲಿಕ್ಕಾಗಿ ತಮ್ಮ ಮನೆಯ ಹೊರಗೆ ಇರಿಸಿದರು. ಫೇಸ್‌ಬುಕ್‌ನಲ್ಲಿ ಪುಟವೊಂದನ್ನು ತೆರೆದು, ಆ ಫ್ರಿಜ್‌ನಲ್ಲಿ ನೀರು ಮತ್ತು ಆಹಾರವನ್ನು ಇರಿಸಿ ತಮ್ಮ ಉದ್ದೇಶಕ್ಕೆ ಪ್ರೋತ್ಸಾಹ ನೀಡಬೇಕೆಂದು ಜನರನ್ನು ವಿನಂತಿಸಿಕೊಂಡರು. ಅವರ ಕೋರಿಕೆಗೆ ಭಾರೀ ಪ್ರತಿಕ್ರಿಯೆ ವ್ಯಕ್ತವಾಗಿ, ಆ ಒಂದು ಫ್ರಿಜ್ ಸಾಕಾಗದೇ ಹೋಯಿತು. ಆ ಸ್ಪಂದನಕ್ಕೆ ಬೆರಗಾದ ಫಿಕ್ರಾರವರು ತಕ್ಷಣವೇ ಇದನ್ನೊಂದು ಅಭಿಯಾನವನ್ನಾಗಿ ಮಾರ್ಪಡಿಸಲು ಯೋಜನೆ ಪ್ರಾರಂಭಿಸಿದರು. ಅದಕ್ಕೆ ಅವರು ನೀಡಿದ ಹೆಸರೇ 'ರಮಧಾನ್ ಶೇರಿಂಗ್ ಫ್ರಿಜ್'.

2016ರ ರಂಜಾನ್ ಮೊದಲ ದಿನ ಒಂದು ಫ್ರಿಜ್‌ನಿಂದ ಪ್ರಾರಂಭಿಸಿದ ಈ ಅಭಿಯಾನ ತಿಂಗಳು ಕೊನೆಗೊಳ್ಳುವಷ್ಟರಲ್ಲಿ 170 ಫ್ರಿಜ್‌ಗಳಿಗೆ ಏರಿತ್ತು. ಪ್ರಸ್ತುತ ಈ ಸಂಖ್ಯೆ 30 ಸಾವಿರದ ಹತ್ತಿರ ತಲುಪಿದೆ! ದುಬೈ ನಗರದ ಹಲವೆಡೆಗಳಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ.

ತಮ್ಮ ಮನೆಯ ಹೊರಗೊಂದು ಫ್ರಿಜ್ ಇರಿಸಿ, ಅದಕ್ಕೆ ಅಗತ್ಯವಿರುವ ವಿದ್ಯುತ್ ಪೂರೈಸುವ ಸಾಮರ್ಥ್ಯ ಇರುವ ಯಾರೇ ಆದರೂ ಅಭಿಯಾನದಲ್ಲಿ ಪಾಲ್ಗೊಳ್ಳಬಹುದು. ಬಳಿಕ ಆ ಸ್ಥಾನದ ನಿಖರ ಗುರುತನ್ನು ಮ್ಯಾಪ್‌ನಲ್ಲಿ ಗುರುತಿಸಿಕೊಂಡು ಫೇಸ್‌ಬುಕ್ ಪುಟದಲ್ಲಿ ತಮ್ಮನ್ನು ತಾವು ದಾಖಲಿಸಿಕೊಳ್ಳುವ ಮೂಲಕ ಈ ಅಭಿಯಾನದ ಸದಸ್ಯರಾಗಬಹುದು. ದಾನಿಗಳು ನೀಡಿದ ನೀರು, ಆಹಾರವಸ್ತುಗಳ ನಿರ್ವಹಣೆ, ಸ್ವಚ್ಛತೆ, ಇತ್ಯಾದಿಗಳನ್ನು ನೋಡಿಕೊಳ್ಳಲಿಕ್ಕಾಗಿ 'ರಂಜಾನ್ ಫ್ರಿಜ್ ಮ್ಯಾನೇಜರ್' ಸ್ವಯಂಸೇವಕರ ಪಡೆಯೇ ತಯಾರಾಗಿದೆ.

ಅಭಿಯಾನದ ಒಂದು ಕಟ್ಟುಪಾಡು ಎಂದರೆ ಅದರಲ್ಲಿ ದಾನಿಗಳಿಂದ ಕೇವಲ ಆಹಾರವಸ್ತುಗಳನ್ನು ಮಾತ್ರವೇ ಸ್ವೀಕರಿಸಲಾಗುತ್ತದೆಯೇ ಹೊರತು ಹಣದ ರೂಪದಲ್ಲಿ ನೀಡಲು ಸಾಧ್ಯವಿಲ್ಲ ಹಾಗೂ ಯಾವ ಸದಸ್ಯರೂ ಹಣವನ್ನು ಯಾರಿಂದಲೂ ಕೇಳುವಂತಿಲ್ಲ!

ಪ್ರಸಕ್ತ ವರ್ಷದ ರಂಜಾನ್ ತಿಂಗಳಿನಲ್ಲಿ ದುಬೈ ನಗರದ ನಲವತ್ತೊಂದು ಶಾಲೆಗಳು ಪಾಲ್ಗೊಳ್ಳುವ ಮೂಲಕ ಅಭಿಯಾನಕ್ಕೆ ಹೊಸ ಹುರುಪು ಮೂಡಿದೆ. ಹಲವು ಶಾಲೆಗಳ ಹೊರಭಾಗದಲ್ಲಿ ಶಾಲಾ ಸಂಸ್ಥೆಗಳೇ ಹೊಸ ಫ್ರಿಜ್ಜುಗಳನ್ನಿರಿಸಿ ಆಹಾರ ವಸ್ತುಗಳನ್ನು ಮಕ್ಕಳೇ ಇರಿಸಲು ಪ್ರೋತ್ಸಾಹಿಸುತ್ತಿವೆ. ಎಲ್‌ಕೆಜಿ ತರಗತಿಗೆ ಹೋಗುವ ಎಳೆಯರೂ ತಮ್ಮ ಪಾಲಿನ ಬಿಸ್ಕತ್ತುಗಳನ್ನು ಫ್ರಿಜ್‌ನಲ್ಲಿರಿಸುವುದನ್ನು ನೋಡಿದಾಗ ಮಕ್ಕಳ ಬಗ್ಗೆ ಅಪಾರ ಹೆಮ್ಮೆ ಮೂಡದಿರಲು ಸಾಧ್ಯವಾಗದಿರದು.

ಅಪ್ಪಟ ಮಾನವೀಯತೆಯನ್ನು ಸಾರುವ ಈ ಅಭಿಯಾನದಲ್ಲಿ ಪಾಲ್ಗೊಳ್ಳಲು ಅಥವಾ ಅದರ ಪ್ರಯೋಜನವನ್ನು ಪಡೆಯಲು ಜಾತಿ, ಮತ, ರಾಷ್ಟ್ರೀಯತೆ ಯಾವುದೂ ಅಡ್ಡಿಯಾಗುವುದಿಲ್ಲ. 'ಉಳ್ಳವರಿಂದ ಇಲ್ಲದವರಿಗೆ' ಎಂಬ ಏಕಮಾತ್ರ ಉದ್ದೇಶದಿಂದ ಜನರೇ ಸ್ವತಃ ಸ್ವಯಂಸೇವಕರಾಗಿ ಮುಂದೆ ಬಂದು ಮಾಡುತ್ತಿರುವ ಸತ್ಕಾರ್ಯ ಕೇವಲ ದುಬೈ ನಗರಕ್ಕೆ ಮಾತ್ರ ಸೀಮಿತವಾಗಬಾರದು, ಇದು ವಿಶ್ವದಾದ್ಯಂತ ಹರಡಬೇಕು. ಆಗಲೇ ನಾವು ಕುವೆಂಪುರವರ ನಿಜವಾದ ವಿಶ್ವಮಾನವರಾಗುತ್ತೇವೆ.

**ಬೆಂಗಳೂರಿನಲ್ಲಿಯೂ ಫ್ರಿಜ್:** ಬೆಂಗಳೂರಿನ ಇಂದಿರಾನಗರದಲ್ಲಿರುವ ಬೈಬ್ಲೋಸ್ ಎಂಬ ಲೆಬನೀಸ್ ಹೋಟೆಲ್ ಸಹಾ ತನ್ನ ಕಟ್ಟಡದ ಮುಂಭಾಗದಲ್ಲಿ ಫ್ರಿಜ್ಜೊಂದನ್ನು ಇರಿಸಿ ಆಹಾರವನ್ನು ಉಚಿತವಾಗಿ ಅರ್ಹರಿಗೆ ಒದಗಿಸುವ ವ್ಯವಸ್ಥೆಯನ್ನು ಪ್ರಾರಂಭಿಸಿದೆ. ಈ ಹೋಟೆಲಿನಲ್ಲಿ ತಯಾರಾಗಿರುವ ಹೆಚ್ಚುವರಿ ಆಹಾರವನ್ನು ಸಮಯ ಮೀರುವ ಮುನ್ನವೇ ಈ ಫ್ರಿಜ್ಜಿನಲ್ಲಿರಿಸಲಾಗುತ್ತದೆ. ಅಕ್ಕ ಪಕ್ಕದ ಅಗತ್ಯವುಳ್ಳ ವ್ಯಕ್ತಿಗಳು ಈ ಫ್ರಿಜ್ಜಿನಿಂದ ತಮಗೆ ಬೇಕಾದ ಆಹಾರವನ್ನು ಪಡೆದುಕೊಳ್ಳುತ್ತಾರೆ. ಅಮ್ಮಾರ್ ಮೋಲ್ಕಿ ಎಂಬ ಹೆಸರಿನ ವ್ಯಕ್ತಿ ಈ ಹೋಟೆಲಿನ ಮಾಲಿಕರಾಗಿದ್ದು ಪ್ರಾರಂಭದಲ್ಲಿ ಫ್ರಿಜ್ ಇಲ್ಲದೆಯೇ ಆಹಾರವನ್ನು ಇವರು ಅಗತ್ಯವುಳ್ಳವರಿಗೆ ವಿತರಿಸುತ್ತಿದ್ದರು. ಈಗ ಸಹೃದಯರ ನೆರವಿನೊಂದಿಗೆ ಅವರ 'ಇಫ್ತಾರ್' ಸೇವೆ ಮುಂದುವರಿದಿದೆ.




